ಸ್ಥಾಪನೆ : 1991

# ಬೆಳಗಾವಿ ಜಿಲ್ಲಾ ಕನ್ನಡ ಸಂಘಟನೆಗಳ ಕ್ರಿಯಾ ಸಮಿತಿ, ಬೆಳಗಾವಿ

3868, ಮೊದಲ ಮಹಡಿ, ಡಾ|| ಸಾವಂತ ಆಸ್ಪತ್ರೆ, ಶನಿವಾರ ಖೂಟ, ಕಾಕತಿವೇಸ ರಸ್ತೆ ಬೆಳಗಾವಿ-2

ಮೊ : 9448114466 ವ್ಯಾಟ್ಸಪ್ : 9620114466 ಇ-ಮೇಲ್ : ashokchandargi@gmail.com

ದಿ.17-02-2021

**(ಎಲ್ಲ ಲೋಕಸಭಾ ಸದಸ್ಯರಿಗೆ ಇ-ಮೇಲ್ ಮೂಲಕ ಕಳಿಸಲಾಗಿದೆ.)**

**ರಿಗೆ,**

**ಮಾನ್ಯ ಲೋಕಸಭಾ ಸದಸ್ಯರು**
**ಕರ್ನಾಟಕ**

**ವಿಷಯ : ಕರ್ನಾಟಕ ಮಹಾರಾಷ್ಟ್ರ ಗಡಿ ವಿವಾದ ಸಂಬಂಧ ಶಿವಸೇನಾ ಸಂಸದರು ಲೋಕಸಭೆಯಲ್ಲಿ ಪ್ರಸ್ತಾಪಿಸಿದ ಹಾಗೂ ಕರ್ನಾಟಕದ ಸಂಸದರು ದಿವ್ಯ ಮೌನವಹಿಸಿರುವ ಕುರಿತು ಕರ್ನಾಟಕದ ಜನತೆಯಲ್ಲಿ ತೀವ್ರ ಅಸಮಾಧಾನ ಹಾಗೂ ಆಕ್ರೋಶ ಉಂಟಾಗಿರುವ ಕುರಿತು.**

**ಮಾನ್ಯರೇ,**

ಕರ್ನಾಟಕ ಮಹಾರಾಷ್ಟ್ರ ಗಡಿ ವಿವಾದ ಕುರಿತು ಮಹಾರಾಷ್ಟ್ರದಲ್ಲಿ ಅಧಿಕಾರದಲ್ಲಿರುವ ಶಿವಸೇನಾ ನೇತೃತ್ವದ ಸರಕಾರವು ಕಳೆದ ಕೆಲವು ತಿಂಗಳುಗಳಿಂದ ಕರ್ನಾಟಕದ ಜೊತೆಗೆ ಕಾಲು ಕೆದರಿ ವಿವಾದವುಂಟು ಮಾಡುವದು ತಮಗೆ ಗೊತ್ತಿರುವ ಸಂಗತಿಯಾಗಿದೆ. ಸ್ವತಃ ಮುಖ್ಯಮಂತ್ರಿ ಉದ್ಧವ ಠಾಕ್ರೆ ಅವರು ಕರ್ನಾಟಕದ ವಿರುದ್ಧ ಟ್ವೀಟ್ ಮಾಡುವದು, ಗಡಿವಿವಾದ ಕುರಿತು ಪುಸ್ತಕ ಹೊರ ತರುವದು, ಕರ್ನಾಟಕದ ಗಡಿ ಭಾಗಕ್ಕೆ ನೂರಾರು ಶಿವಸೇನಾ ಕಾರ್ಯಕರ್ತರನ್ನು ಕಳಿಸಿ ಅಶಾಂತಿವುಂಟು ಮಾಡುವ ಚಟುವಟಿಕೆಯಲ್ಲಿ ತೊಡಗಿದ್ದಾರೆ.

ಕಳೆದ 16 ವರ್ಷಗಳಿಂದ ಸರ್ವೋನ್ನತ ನ್ಯಾಯಾಲಯದ ಮುಂದಿರುವ ಗಡಿವಿವಾದದ ಪ್ರಕರಣವನ್ನು ಇದೇ ಫೆಬ್ರುವರಿ 13 ರ ರಂದು ಮುಂಬೈ ಸಂಸದ ರಾಹುಲ ಶೇವಾಳೆ ಅವರು ಲೋಕಸಭೆಯಲ್ಲಿ ಪ್ರಸ್ತಾಪಿಸಿದರಲ್ಲದೇ ದೇಶದ ಜನತೆಯ ಹಾಗೂ ಕೇಂದ್ರ ಸರಕಾರವನ್ನು ತಪ್ಪು ದಾರಿಗೆ ಎಳೆಯುವ ಕೆಲಸ ಮಾಡಿದ್ದಾರೆ. 1948 ರಲ್ಲಿ ಬೆಳಗಾವಿ ಮಹಾನಗರ ಪಾಲಿಕೆಯು, ಬೆಳಗಾವಿಯನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕೆಂದು ಒತ್ತಾಯಿಸುವ ನಿರ್ಣಯ ಕೈಕೊಂಡಿದ್ದನ್ನು ಶೇವಾಳ ಅವರು ಎತ್ತಿ ತೋರಿಸಿದ್ದಾರೆ. ಆದರೆ 1956 ರ ರಲ್ಲಿ ರಾಜ್ಯ ಪುನರ್ರಚನೆ ಆಯೋಗ, 1948 ರಲ್ಲಿ ಸಂವಿಧಾನ ಸಭೆಯು ನೇಮಕ ಮಾಡಿದ್ದ ಧಾರ್ ಆಯೋಗ, ಅಖಿಲ ಭಾರತ ಕಾಂಗ್ರೆಸ್ ಪಕ್ಷವು ರಚಿಸಿದ್ದ ಜೆವ್ಹಿಪಿ. ಸಮಿತಿ ನೀಡಿದ ವರದಿ ಹಾಗೂ 1967 ರಲ್ಲಿ ಮಹಾಜನ ಆಯೋಗ ನೀಡಿದ ವರದಿಗಳನ್ನು ಸಂಸದರು ಮರೆಮಾಚಿದ್ದಾರೆ. ಅಲ್ಲದೇ 1999 ರಲ್ಲಿ ಕರ್ನಾಟಕದ ಗಡಿ ಭಾಗದ ಎಲ್ಲ ಸ್ಥಾನಗಳನ್ನು ಮಹಾರಾಷ್ಟ್ರ ಏಕೀಕರಣ ಸಮಿತಿ ಕಳೆದುಕೊಂಡು ಸೋತು ಸುಣ್ಣವಾಗಿದ್ದನ್ನು ಶಿವಸೇನಾ ಸದಸ್ಯರು ಪ್ರಸ್ತಾಪಿಸದೇಯಿರುವದು ಅವರ ಕುತಂತ್ರಕ್ಕೆ ಸಾಕ್ಷಿಯಾಗಿದೆ.

ಶಿವಸೇನಾ ಸದಸ್ಯರು, ನ್ಯಾಯಾಲಯದ ಮುಂದಿರುವ ಪ್ರಕರಣವು ಇತ್ಯರ್ಥವಾಗುವವರೆಗೆ, ಬೆಳಗಾವಿಯನ್ನು ಕೇಂದ್ರ ಶಾಸಿತ ಪ್ರದೇಶವನ್ನಾಗಿ ಘೋಷಿಸಬೇಕೆಂದು ಕೇಂದ್ರ ಸರಕಾರವನ್ನು ಒತ್ತಾಯಿಸಿದ್ದು ಅವರ ಅಜ್ಞಾನಕ್ಕೆ ಸಾಕ್ಷಿಯಾಗಿದೆ. ಆದರೆ ಶಿವಸೇನಾ ಸದಸ್ಯರಿಗೆ ಕರ್ನಾಟಕದ ಸಂಸದರು ಯಾವುದೆ ರೀತಿ ಎದಿರೇಟು ಕೊಡದೇ ಅವರ ವಾದಕ್ಕೆ ಪ್ರತಿ ವಾದವನ್ನು ಮಾಡದೆ ಮೌನವಹಿಸಿದ್ದು ಇಡೀ ಕರ್ನಾಟಕದ ಜನತೆಗೆ ಆಘಾತವುಂಟು ಮಾಡಿದೆ. ಈ ಹಿಂದೆ ದಿ. ಅಟಲ್ ಬಿಹಾರಿ ವಾಜಪೇಯಿ ಸರಕಾರ ಅಧಿಕಾರದಲ್ಲಿದ್ದಾಗ ಮಹಾರಾಷ್ಟ್ರದ ಸಂಸದರು ಪಕ್ಷ ಬೇದ ಮರೆತು ಲೋಕಸಭೆಯಲ್ಲಿ ಮಹಾರಾಷ್ಟ್ರದ ಪರವಾಗಿ ಗೊಂದಲ ಹಾಕಿದ ಸಂದರ್ಭಗಳು

ನಡೆದು ಹೋಗಿವೆ. ಆಗ ದಿ. ಅನಂತಕುಮಾರ ಅವರು ಹಾಗೂ ಇತರ ಕಾಂಗ್ರೆಸ್ ಪಕ್ಷದ ಕರ್ನಾಟಕದ ಸಂಸದರು ಒಗ್ಗಟ್ಟಿನಿಂದ ಕರ್ನಾಟಕದ ಪರವಾಗಿ ಧ್ವನಿ ಎತ್ತಿದ ನಿದರ್ಶನಗಳಿವೆ.

ಕರ್ನಾಟಕದಿಂದ ಆಯ್ಕೆಯಾಗಿ ತಾವು ಕರ್ನಾಟಕದ ನಾಡು, ನುಡಿ, ಗಡಿ ಹಿತಾಸಕ್ತಿಯ ಪ್ರಶ್ನೆ ಬಂದಾಗ ತಾವು ಲೋಕಸಭೆಯಲ್ಲಿ ಕರ್ನಾಟಕದ ಪರವಾಗಿ ಗಟ್ಟಿಯಾಗಿ ನಿಲ್ಲಬೇಕೆಂಬುದು ನಾಡಿನ ಜನತೆಯ ಆಶಯವಾಗಿದೆ. ತಾವು ಮೌನವಹಿಸಿದರೆ ಮಹಾರಾಷ್ಟ್ರದ ವಾದವೇ ನಿಜವಾಗಿದೆಯೆಂಬ ತಪ್ಪು ಸಂದೇಶ ಕೇಂದ್ರಕ್ಕೆ ರವಾನೆಯಾಗುತ್ತದೆ. ಇಂತಹ ಸನ್ನಿವೇಶಕ್ಕೆ ತಾವು ಸರ್ವಥಾ ಅವಕಾಶ ಮಾಡಿ ಕೊಡಬಾರದು. ಕರ್ನಾಟಕದ ಅನ್ನ, ನೀರು ಕುಡಿದು ಬೆಳೆದು ಬಹು ಎತ್ತರಕ್ಕೆ ಹೋಗಿರುವ ತಾವು ಕನ್ನಡ ತಾಯಿಗೆ ದ್ರೋಹ ಬಗೆಯುವ ಕೆಲಸವನ್ನು ಮಾಡಬಾರದು. ಕಳೆದ ಫಬ್ರುವರಿ 13 ರ ತಮ್ಮೆಲ್ಲರ ಮೌನ ಬಹಳಷ್ಟು ತಪ್ಪು ಸಂದೇಶವನ್ನು ಕರ್ನಾಟಕದ ಜನತೆಗೆ ನೀಡಿದಂತಾಗಿದೆ. ತಾವು ಪ್ರಧಾನಿ ಶ್ರೀ ನರೇಂದ್ರ ಮೋದಿಯವರನ್ನು ಭೆಟ್ಟಿಯಾಗಿ ಮಹಾರಾಷ್ಟ್ರದ ಕುಚೋದ್ಯತನವನ್ನು ವಿವರಿಸಬೇಕು. ಅಲ್ಲದೇ ಮಹಾರಾಷ್ಟ್ರದ ಶಿವಸೇನಾ ಸರಕಾರದ ಇಂತಹ ಪ್ರಯತ್ನಗಳಿಗೆ ಕಡಿವಾಣ ಹಾಕುವಂತೆ ಒತ್ತಾಯಿಸಬೇಕು. ಅಲ್ಲದೆ ಸರ್ವೋನ್ನತ ನ್ಯಾಯಾಲಯದ ಮುಂದೆ ಗಡಿವಿವಾದ ಕುರಿತ ವಸ್ತು ಸ್ಥಿತಿಯನ್ನು ಕೇಂದ್ರವು ಮಂಡಿಸುವಂತೆ ಆಗ್ರಹಿಸಬೇಕು.

2004 ರಿಂದ ನ್ಯಾಯಾಲಯದ ಮುಂದಿರುವ ಗಡಿವಿವಾದ ಪ್ರಕರಣವು ಆದಷ್ಟು ಬೇಗ ತಿರಸ್ಕಾರವಾಗುವಂತೆ ಕೇಂದ್ರವು ಸಾಧ್ಯವಿರುವ ಎಲ್ಲ ಕ್ರಮಗಳನ್ನು ಕೈಕೊಳ್ಳಬೇಕೆಂದು ತಾವು ಪ್ರಧಾನಿ ಹಾಗೂ ಕೇಂದ್ರ ಕಾನೂನು ಸಚಿವರನ್ನು ಆಗ್ರಹಿಸಬೇಕೆಂಬುದು ನಮ್ಮ ಆಶಯವಾಗಿದೆ.

ಕರ್ನಾಟಕದ ಸಂಸದರ ಬಗ್ಗೆ ನಮಗಿರುವ ಭಾವನೆಗಳನ್ನು ತಾವು ಅರ್ಥ ಮಾಡಿಕೊಂಡು ಮುಂದುವರೆಯುತ್ತಿರೆಂದು ನಾವು ನಂಬಿಗೆ ಹಾಗೂ ವಿಶ್ವಾಸದಿಂದ ಈ ಪತ್ರ ಬರೆದಿದ್ದೇವೆ.

**ವಂದನೆಗಳೊಂದಿಗೆ**

**ತಮ್ಮ ವಿಶ್ವಾಸಿ**

**ಅಶೋಕ ಚಂದರಗಿ**
**ಅಧ್ಯಕ್ಷರು**

**1) ಶಿವಪ್ಪ ಶಮರಂತ, ಕಾರ್ಯಾಧ್ಯಕ್ಷರು 2) ಎಂ.ಜಿ. ಮಕಾನದಾರ, ಉಪಾಧ್ಯಕ್ಷರು**
**3) ಶಂಕರ ಬಾಗೇವಾಡಿ, ಉಪಾಧ್ಯಕ್ಷರು 4) ಸಲೀಮ ಖತೀಬ (ಅಲ್ಪ ಸಂಖ್ಯಾತ ಧುರೀಣರು)**
**5) ಸಾಗರ ಬೋರಗಲ್ಲ, ಕಾರ್ಯದರ್ಶಿ 7) ರಾಜು ಕುಸೋಜಿ, ಕಾರ್ಯದರ್ಶಿ**
**8) ವೀರೇಂದ್ರ ಗೋಬರಿ, ಖಜಾಂಚಿ 9) ಜಿನೇಶ ಅಪ್ಪನ್ನವರ**
**10) ರಜತ ಅಂಕಲೆ**